# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1228**

**ಮಾನ್ಯ ಸದಸ್ಯರ ಹೆಸರು** : **ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸುವ ದಿನಾಂಕ** : **19-12-2024**

**ಉತ್ತರಿಸುವ ಸಚಿವರು** : **ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆನ್‌ಲೈನ್ ವಂಚನೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. |
| ಆ) | ಹಾಗಿದ್ದಲ್ಲಿ, ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ: (ವಿವರವಾಗಿ ಮಾಹಿತಿ ನೀಡುವುದು) | ಕಳೆದ ನಾಲ್ಕು ವರ್ಷಗಳಲ್ಲಿ ದಾಖಲಾಗಿರುವ ಆನ್‌ಲೈನ್ ವಂಚನೆ ಪ್ರಕರಣಗಳು ಈ ಕೆಳಕಂಡಂತಿರುತ್ತವೆ. (ಕೋಷ್ಟಕ ಕೆಳಗೆ) |
| ಇ) | ಸದರಿ 2 ವರ್ಷಗಳಲ್ಲಿ ನಡೆದಿರುವ ಆನ್‌ಲೈನ್ ವಂಚನೆಗಳಲ್ಲಿ ಅತಿ ಹೆಚ್ಚು ಪ್ರಕರಣಗಳು ರಾಜಧಾನಿ ಬೆಂಗಳೂರಿನಲ್ಲಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ಸಂಪೂರ್ಣ ಮಾಹಿತಿ ಒದಗಿಸುವುದು) | ಸದರಿ 2 ವರ್ಷಗಳಲ್ಲಿ ಬೆಂಗಳೂರಿನಲ್ಲಿ ನಡೆದಿರುವ ಆನ್ ಲೈನ್ ವಂಚನೆಗಳ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ. (ಕೋಷ್ಟಕ ಕೆಳಗೆ) |
| ಈ) | ಸದರಿ ಆನ್‌ಲೈನ್ ವಂಚನೆಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕಠಿಣ ಕ್ರಮಗಳೇನು: (ವಿವರವಾಗಿ ಮಾಹಿತಿ ನೀಡುವುದು) | ಆನ್‌ಲೈನ್ ವಂಚನೆಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

ಆ) ಉತ್ತರದ ಕೋಷ್ಟಕ:

| **ವರ್ಷ** | **ದಾಖಲಾಗಿರುವ ಪ್ರಕರಣಗಳ ಸಂಖ್ಯೆ.** |
|---|---|
| 2021 | 8362 |
| 2022 | 12879 |
| 2023 | 22194 |
| 2024 (ನವೆಂಬರ್ 30 ರವರೆಗೆ) | 20875 |

ಇ) ಉತ್ತರದ ಕೋಷ್ಟಕ:

| **ವರ್ಷ** | **ವರದಿ** | **ಪತ್ತೆ** | **ಪತ್ತೆ ಮಾಡಬೇಕಾದ ಪ್ರಕರಣಗಳು** |
|---|---|---|---|
| 2023 | 17714 | 3458 | 14256 |
| 2024 (ನವೆಂಬರ್ 30 ರವರೆಗೆ) | 16474 | 748 | 15726 |

ಸಂಖ್ಯೆ: ಹೆಚ್‌ಡಿ 81 ಪಿಸಿಕ್ಯೂ 2024

(ಸಹಿ)

**(ಡಾ: ಜಿ. ಪರಮೇಶ್ವರ)**

ಗೃಹ ಸಚಿವರು

## ಅನುಬಂಧ-

## ಸೈಬರ್ ಪ್ರಕರಣಗಳನ್ನು ನಿಯಂತ್ರಿಸಲು ಕೈಗೊಳ್ಳಲಾಗುತ್ತಿರುವ ಕ್ರಮಗಳ ವಿವರ:

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಸಾರ್ವಜನಿಕರಲ್ಲಿ ಇಂಟರ್‌ನೆಟ್ ಬಳಕೆ ಹೆಚ್ಚಿದ್ದು ಇದರ ಪ್ರಯೋಜನವನ್ನು ಪಡೆಯುತ್ತಿರುವ ಸೈಬರ್ ವಂಚಕರು ವಿವಿಧ ಸ್ಥಳಗಳಲ್ಲಿ ಸಾರ್ವಜನಿಕರನ್ನು ವಂಚಿಸುತ್ತಿರುವುದು ವರದಿಯಾಗುತ್ತಿವೆ. ಈ ಪ್ರಕರಣಗಳನ್ನು ನಿಯಂತ್ರಿಸಿ ಸಾರ್ವಜನಿಕರ ಹಣ ದುರಪಯೋಗವಾಗದಂತೆ ಮತ್ತು ವಂಚನೆಗೊಳಗಾಗದಂತೆ ಸರ್ಕಾರವು ಮುಂಜಾಗ್ರತೆ ಕ್ರಮ ವಹಿಸುತ್ತಿದೆ.

1. ರಾಜ್ಯದಲ್ಲಿರುವ ಸೈಬರ್ ಠಾಣೆಗಳ ಮೇಲುಸ್ತುವಾರಿಗಾಗಿ ಡಿ.ಜಿ.ಪಿ (ಸೈಬರ್ ಮತ್ತು ನಾರ್‌ಕೋಟಿಕ್ಸ್) ಹುದ್ದೆಯನ್ನು ಸೃಜಿಸಲಾಗಿದೆ.

2. ರಾಜ್ಯದಲ್ಲಿ ಸೈಬರ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಡಿಸೆಂಬರ್ 2021 ರಿಂದ ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಸಹಯೋಗದೊಂದಿಗೆ ಎನ್.ಸಿ.ಆರ್.ಟಿ National Cyber Crime Reporting Portal 1930 ಮತ್ತು 112 ಸಹಾಯವಾಣಿಯನ್ನು ಸಾರ್ವಜನಿಕರಿಗಾಗಿ ಪ್ರಾರಂಭಿಸಲಾಗಿದ್ದು, ವಂಚನೆಗೆ ಒಳಗಾದಾಗ ಈ ಪೋರ್ಟಲ್ ಮೂಲಕ ಪ್ರಕರಣವನ್ನು ದಾಖಲಿಸಲು ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ ಹಾಗೂ ಈ ವ್ಯವಸ್ಥೆಯಡಿ ರಾಜ್ಯದಲ್ಲಿ ವರದಿಯಾಗುತ್ತಿರುವ ದೂರುಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಮುಖಾಂತರ ಅಕ್ರಮ ವರ್ಗಾವಣೆಯಾದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗುತ್ತಿದೆ.

3. ಸೈಬರ್ ವಂಚನೆ ಪ್ರಕರಣಗಳನ್ನು ತ್ವರಿತ ಗತಿಯಲ್ಲಿ ತನಿಖೆ ಮಾಡಿ ಸಾರ್ವಜನಿಕರಿಗೆ ಅಕ್ರಮ ನಷ್ಟ ತಪ್ಪಿಸುವ ಸಲುವಾಗಿ ರಾಜ್ಯದಲ್ಲಿ ಹೊಸದಾಗಿ 43 ಸೆನ್ ಪೊಲೀಸ್ ಠಾಣೆಗಳನ್ನು ಸೃಜಿಸಲಾಗಿದ್ದು, ಗುಣಮಟ್ಟದ ತನಿಖೆಯನ್ನು ಖಚಿತಪಡಿಸುವ ಸಲುವಾಗಿ ಡಿವೈ.ಎಸ್.ಪಿ/ಎ.ಸಿ.ಪಿ ದರ್ಜೆಯ ಅಧಿಕಾರಿಗಳನ್ನು ಎಸ್.ಹೆಚ್.ಓ ಗಳನ್ನಾಗಿ ಮಾಡಲಾಗಿದೆ.

4. ಸಿಐಡಿಯ ಕಛೇರಿಯ Centre for Cybercrime Investigation Training & Research (CCITR) ವಿಭಾಗದಲ್ಲಿ 2019 ಸಾಲಿನಿಂದ ಸರ್ಕಾರಿ ಸಂಸ್ಥೆಗಳು, ನ್ಯಾಯಾಧೀಶರುಗಳಿಗೆ, ಕಾನೂನು ಅಭಿಯೋಜಕರಿಗೆ, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ಹಲವಾರು ತರಬೇತಿಗಳನ್ನು ನೀಡಲಾಗುತ್ತಿರುತ್ತದೆ. ಪ್ರಸಕ್ತ 2024 ನೇ ಸಾಲಿನಲ್ಲಿ ಸಿಐಡಿ ಕಛೇರಿಯ ಸಿ.ಸಿ.ಐ.ಟಿ.ಆರ್ ಘಟಕದಲ್ಲಿ ಕೈಗೊಂಡ ತರಬೇತಿ ವಿವರಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

| ಕ್ರಮ ಸಂ | ತರಬೇತಿಯ ವಿವರ | ತರಬೇತಿ ಪಡೆದವರ ಸಂಖ್ಯೆ |
|---|---|---|
| 01 | ಮಾನ್ಯ ನ್ಯಾಯಾಧೀಶರುಗಳಿಗೆ ಸೈಬರ್ ಅಪರಾಧ ತರಬೇತಿ | 176 |
| 02 | ಕರ್ನಾಟಕ ರಾಜ್ಯದ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳ ಲೆವಲ್-1 & ಲೆವಲ್-2 ತರಬೇತಿ | 984 |
| 03 | ಕರ್ನಾಟಕ ರಾಜ್ಯದ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳಿಗೆ ಆನ್‌ಲೈನ್ ತರಬೇತಿ | 3799 |

5. ಸೈಬರ್ ವಂಚನೆಯ ಪ್ರಕರಣಗಳ ಬಗ್ಗೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್ ಹಾಗೂ ಟ್ವೀಟರ್‌ಗಳ ಮೂಲಕ ಸೈಬರ್ ಜಾಗೃತಿಯ ಬಗ್ಗೆ ಕಿರುಚಿತ್ರ ಹಾಗೂ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ನೀಡಲಾಗುತ್ತಿದೆ. ಶಾಲಾ ಕಾಲೇಜುಗಳಿಗೆ, ಇತರೆ ಸಂಸ್ಥೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿ ಹಾಗೂ ಸಾರ್ವಜನಿಕರುಗಳಿಗೆ ಸೈಬರ್ ವಂಚನೆಯ ಬಗ್ಗೆ ಜಾಗೃತಿ ಮೂಡಿಸಲು ಜಾಗೃತಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

6. ಪೊಲೀಸ್ ಇಲಾಖೆಯು RBI ಮತ್ತು ಎಲ್ಲಾ ಇತರ ಬ್ಯಾಂಕಿಂಗ್ ಹಾಗೂ ಹಣಕಾಸು ವ್ಯವಸ್ಥೆಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸೈಬರ್ ಅಪರಾಧಗಳಲ್ಲಿ ಭಾಗಿಯಾದ ಬ್ಯಾಂಕ್ ಖಾತೆಗಳ ಮಾಹಿತಿಯನ್ನು ಪಡೆದು ಕ್ರಮಕೈಗೊಳ್ಳಲಾಗುತ್ತಿದೆ.

7. ಬೆಂಗಳೂರು ನಗರದಲ್ಲಿ ಸೈಬರ್ ಅಪರಾಧಿಗಳ ಮೇಲೆ ನಿಯಂತ್ರಣ ಸಾಧಿಸುವ ಸಲುವಾಗಿ ಬೆಂಗಳೂರು ಆಕಾಶವಾಣಿ ಕೇಂದ್ರದಿಂದ ಸೆಪ್ಟೆಂಬರ್-25 ಸೋಮವಾರ ದಿಂದ ಪ್ರತಿ ಸೋಮವಾರ ಬೆಳಗ್ಗೆ 10.30 ರಿಂದ 11.30 ರವರೆಗೆ "**ಪಾತಾಳ ಗಾರುಡಿ**" ಎಂಬ ಕಾರ್ಯಕ್ರಮ ಬಿತ್ತರಿಸಲಾಗುತ್ತಿದ್ದು, ಇದರಲ್ಲಿ ಪೊಲೀಸ್ ಆಯುಕ್ತರು ಆನ್-ಲೈನ್ ವಂಚನೆ, ಆನ್‌ಲೈನ್ ಲೈಂಗಿಕ ಕಿರುಕುಳ, ಆನ್‌ಲೈನ್ ಸಾಲ ವಂಚನೆ, ಆನ್‌ಲೈನ್ ಉದ್ಯೋಗ ವಂಚನೆ ಜಾಲ, ಕ್ರಿಪ್ಟೋ ಕರೆನ್ಸಿ ವಂಚನೆ ಜಾಲ, ಸಾಮಾಜಿಕ ಜಾಲ ತಾಣಗಳ ದುರ್ಬಳಕೆ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ.

8. ಹೊಸ ಮಾದರಿಯ ಆನ್‌ಲೈನ್, ಸೈಬರ್ ವಂಚನೆಗಳ ತ್ವರಿತ ಮತ್ತು ತಾರ್ಕಿಕ ತನಿಖೆಯನ್ನು ಕೈಗೊಳ್ಳುವ ಸಲುವಾಗಿ ತನಿಖಾ ಕೈಪಿಡಿಯನ್ನು (New Cyber Investigation Manual) ಪ್ರಕಟಿಸಲಾಗಿದೆ.

9. ಸಿ.ಐ.ಡಿ ಘಟಕದಲ್ಲಿರುವ Cyber Forensic Cell ನಿಂದ ಪ್ರತಿ ವರ್ಷವು ಸುಮಾರು 1500 ಸೈಬರ್ ಅಪರಾಧ ಪ್ರಕರಣಗಳಿಗೆ ವೈಜ್ಞಾನಿಕ ವರದಿಗಳನ್ನು ನೀಡಲಾಗುತ್ತಿದೆ.

10. ಐಟಿ ಕಾಯ್ದೆ-2000 ಅಡಿಯಲ್ಲಿ ಇನ್ಸ್‌ಪೆಕ್ಟರ್ ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಸೈಬರ್ ಅಪರಾಧಗಳನ್ನು ತನಿಖೆ ಮಾಡುವ ಅಧಿಕಾರವನ್ನು ಪಿ.ಎಸ್.ಐ. ರವರಿಗೂ ನೀಡುವ ಸಂಬಂಧ ಚರ್ಚಿಸಲಾಗುತ್ತಿದೆ.

11. ಸಿಐಡಿ ಕಛೇರಿಯ ಸಿ.ಎಫ್.ಯು ವಿಭಾಗದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಸಾಫಾವೇರ್ ಗಳನ್ನು ಬಳಸಿಕೊಂಡು ಪ್ರಕರಣಗಳಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದ್ದು, ಸದರಿ ಸಿ.ಎಫ್.ಯು ವಿಭಾಗದಲ್ಲಿ Magnet AXIOM, Belkasoft evidence center X, Cellbrite Digital Collector (Mac Forensic) Cellbrite Inspector (Mac Forensic), Oxygen forensic detective, UFED4PC, Hunchly, Merkle science. Pasware kit Forensic ಮುಂತಾದ ಸಾಫ್ಟವೇರ್ ಗಳನ್ನು ತಾಂತ್ರಿಕ ವಿಶ್ಲೇಷಣೆಗಾಗಿ ಸೈಬರ್ ಕ್ರೈಂ ಪ್ರಕರಣಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

12. ಸೈಬರ್ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯಗಳ ಸಬಲೀಕರಣಗೊಳಿಸುವ ಸಂಬಂಧ ಪ್ರಯೋಗಾಲಯಗಳಿಗೆ ಅಗತ್ಯ ವಿರುವ ಉಪಕರಣಗಳನ್ನು ಖರೀದಿಸಲು 10 ಕೋಟಿ ರೂಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. ಖರೀದಿಸಲಿರುವ ಉಪಕರಣಗಳ ವಿವರಗಳು ಈ ಕೆಳಕಂಡಂತಿದೆ.